ರವಿಕೆಗಳು ತಂತಿಯಿಂದ ಕಾಣೆಯಾಗಿದ್ದವು! ಆ ಬಿರು ಬೇಸಿಗೆಯಲ್ಲಿ ಬಟ್ಟೆಗಳನ್ನು ಕ್ಲಿಪ್ಪುಗಳ ಸಮೇತ ಎಗರಿಸಿಕೊಂಡು ಹೋಗುವ ಆಷಾಢದ ಗಾಳಿಯೇನಾದರೂ ಅಪ್ಪಿ ತಪ್ಪಿ ಬೀಸಿ ರವಿಕೆಗಳು ಕೆಳಕ್ಕೆ ಹಾರಿರಬಹುದೆ ಎಂದು ಸುತ್ತಲೂ ಕಣ್ಣಾಡಿಸಿ ನಿರಾಶರಾಗಿ ತನ್ನ ಐದು ಅಭಾಗಿನಿಯರನ್ನು ಯಾವ ಖಳನಾಯಕ ಅಪಹರಿಸಿದ ಎನ್ನುವ ಯಕ್ಷ ಪ್ರಶ್ನೆ ಕಾಡಿ ಕಂಗಾಲಾಗಿದ್ದರು.

ಕೆಳಗಡೆ ಮನೆಯ ಪಾರ್ವತಮ್ಮನವರ ಮುಂದೆ ಈ ವಿಷಯ ಹೇಳಿಕೊಂಡಾಗ ಶಾಕ್ ಹೊಡೆಯುವ (ಕಟು)ಸತ್ಯವೊಂದು ಬಯಲಾಗಿತ್ತು. ''ಇದೆಲ್ಲ ಕಳ್ಳ ಮಾಮಿಯದೆ ಕೈಚಳಕ!'' ಎಂದು ಮೆಲ್ಲನೆ ಉಸರುತ್ತ, ವಠಾರದ ಪ್ರತಿಯೊಬ್ಬ ಮನೆಯವರೂ ಆಕೆಯ ಕಳ್ಳತನದ ಫಲಾನುಭವಿಗಳಾಗಿ ಮನೆ ಹೊರಗಿಟ್ಟ ಪೊರಕೆ, ಚಪ್ಪಲಿ, ತಮ್ಮ ಅಡುಗೆಕೋಣೆಯ ತೆರೆದ ಕಿಟಕಿಯಿಂದ ತಟ್ಟೆ, ಸೌಟು, ಒಣ ಹಾಕಿದ ಬಟ್ಟೆ–ಬರೆ, ಮಕ್ಕಳು ಆಟವಾಡುತ್ತ ಅಂಗಳದಲ್ಲೆ ಮರೆತ ಆಟಿಕೆಗಳು ಎಲ್ಲವೂ ಅವಳ ಕಳ್ಳತನಕ್ಕೆ ಆಹುತಿಯಾಗಿದ್ದನ್ನು ಪರಿ ಪರಿಯಾಗಿ ಬಿಚ್ಚಿಟ್ಟು, ಮಾಮಿ ಮಾಟ ಮಂತ್ರದಲ್ಲಿ ಎತ್ತಿದ ಕೈಯಾದ್ದರಿಂದ ಆಕೆಯನ್ನು ಎದುರು ಹಾಕಿಕೊಳ್ಳಲು ಎಲ್ಲರೂ ಹೆದರುತ್ತಾರೆ ಎನ್ನುವ ಸಂಗತಿಯಿಂದ

